SF

Reg. No. | | | | | | | | | |

# BBAKAL 282

## Choice Based Credit System IV Semester B.B.A. Degree Examination, September 2022
## (2021 – 22 Batch Onwards)
## KANNADA
## Kannada Language – IV

Time : 3 Hours

Max. Marks : 80

I. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. **(3×8=24)**

1) ಅಕ್ಕಮಹಾದೇವಿಯ ವಚನಗಳಲ್ಲಿ ಭಕ್ತನ ಸಮರ್ಪಣಾಭಾವ ಹೇಗೆ ವ್ಯಕ್ತವಾಗಿದೆ ? ವಿವರಿಸಿರಿ.

**ಅಥವಾ**

ಗಾಂಧೀಜಿಯ ವ್ಯಕ್ತಿತ್ವ 'ದಿವ್ಯಜ್ಯೋತಿ' ಕವಿತೆಯಲ್ಲಿ ಹೇಗೆ ಅನಾವರಣಗೊಂಡಿದೆ ? ವಿವರಿಸಿರಿ.

2) ಶೇಷಪ್ರಶ್ನೆಯೊಂದರ ಮೂಲಕ ತನ್ನ ಕೈಕೆಳಗಿನ ಉದ್ಯೋಗಿಗೆ ಸಹಾಯ ಮಾಡಲು ಮೇಲಾಧಿಕಾರಿ ಹೇಗೆ ಪ್ರಯತ್ನಿಸುತ್ತಾನೆ ? ವಿವರಿಸಿರಿ.

**ಅಥವಾ**

'ಕಾಡಿನಲ್ಲಿ ಕಂಡದ್ದು' ಲೇಖನದಲ್ಲಿ ಪ್ರಾಣಿಗಳು ತಮ್ಮ ಆಹಾರಕ್ಕಾಗಿ ಬೇಟೆಯಾಡುವ ಕ್ರಮವು ಹೇಗೆ ಚಿತ್ರಿತವಾಗಿದೆ ? ವಿವರಿಸಿರಿ.

3) ಚೆಂದುಗಿಡಿಯ ಕುತಂತ್ರವು 'ಕೋಟಿ ಚೆನ್ನಯ್ಯ' ಕಥಾಭಾಗದಲ್ಲಿ ಹೇಗೆ ವ್ಯಕ್ತವಾಗಿದೆ ? ವಿವರಿಸಿರಿ.

**ಅಥವಾ**

ಕೋಟಿ-ಚೆನ್ನಯ್ಯರು 'ಪಂಜ'ದಲ್ಲಿ ಕಳೆದ ದಿನಗಳನ್ನು ವಿವರಿಸಿರಿ.

II. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. **(3×5=15)**

1) ಅವ್ವನ ಬದುಕು ಕವನದಲ್ಲಿ ಯಾವ ರೀತಿ ಮೂಡಿ ಬಂದಿದೆ ?

**ಅಥವಾ**

'ನನ್ನ ಹಣೆಯಲ್ಲಿ ನಾಲ್ಕು ಅಕ್ಷರ ಬರೆಯೋ' ಎಂದು ಜೀತ ಮಾಡುವ ಹುಡುಗ ಬೇಡಲು ಕಾರಣವೇನು ?

2) 'ಓಡುವ ಗಿಡಮರಗಳೊಂದಿಗೆ' ಕಥೆಯ ಆಶಯವೇನು ?

**ಅಥವಾ**

ಕನ್ನಡ ಭಾಷೆ ಪೇಲವಗೊಳ್ಳುವುದಕ್ಕೆ ಲೇಖಕರು ನೀಡುವ ಕಾರಣಗಳೇನು ?

3) ಸಾಯನ ಬೈದಿತಿಯ ಪಾತ್ರವನ್ನು ಪರಿಚಯಿಸಿ.

**ಅಥವಾ**

ಎಣ್ಮೂರಲ್ಲಿ ಕೋಟಿ-ಚೆನ್ನಯ್ಯರು ತೋರಿದ ಅದ್ಭುತ ಸಾಹಸವನ್ನು ವಿವರಿಸಿರಿ.

III. ಈ ಕೆಳಗಿನವುಗಳಲ್ಲಿ **ಒಂದರ** ಸಂದರ್ಭ ಸೂಚಿಸಿ ಭಾವಾರ್ಥವನ್ನು ವಿವರಿಸಿರಿ. (1×5=5)

1) ಬಸವಟಿದು ಕಣ್ಣನೀರಿಂ
ದೆಸೆಗೆಟ್ಟೆಲೆ ಮಗನೆ ನಿನ್ನ ನಿನ್ನಾರ್ ಕಾಯ
ಲ್ಕೆ ಸಮರ್ಥರೆನುತ್ತಾಗಳ್
ಬಿಸುಸುಯ್ದುಂ ನೋಡಿ ಜನಕನೆನ್ನಯ ಮೊಗಮಂ

2) ಎಲ್ಲಿಯ ತೃಪ್ತಿ ಎಲ್ಲಿಯ ತಣಿವು
ದುಡಿವಗೆ ಗೊತ್ತು ದೇಹದ ದಣಿವು
ಜೀತಕೆ ಇಳಿದು ಕೈಕಾಲು ಸುಸ್ತು
ನೀರಲ್ಲಾಡಿ ಉಗುರಸುತ್ತು
ಬೆರಳು ಸಂದಿ ಸೆಲೆತು ಸೆಲೆತು
ಕೀವು ತುಂಬಿ ಊತವಾಗಿ
ಇರುವ ರಕ್ತಪಾತವಾಗಿ
ಚಳಿಗೆ ಹಿಂಸೆ
ಒಳಗೆ ಹಿಂಸೆ
ಹಿಂಸೆಗುಂಟೆ ಔಷಧ ?

IV. ಯಾವುದಾದರೂ **ಎರಡು** ಸಾಲುಗಳನ್ನು ಸಂದರ್ಭ ಸ್ವಾರಸ್ಯದೊಂದಿಗೆ ವಿವರಿಸಿರಿ. (2×4=8)

1) ನೊಂದ ನೋವ ನೋಯದವರೆತ್ತ ಬಲ್ಲರು ?
2) ಬೇರೆ ಲೋಕದನುಭಾವ ಬೀರಿ ಅವ ಹೋದನಾವ ದಾರಿ ?
3) ನೊಗ ಹೊತ್ತ ಗಾಣದೆತ್ತಿನ ಹಾಗೆ
4) ಅವರು ಕೊಟ್ಟಿದ್ದಕ್ಕಿಂತ ಪಡೆದುದೇ ಹೆಚ್ಚೆನಿಸುತ್ತದೆ.

V. ಅ) ಯಾವುದಾದರೂ **ಎರಡು** ವಿಷಯಗಳಿಗೆ ಟಿಪ್ಪಣಿ ಬರೆಯಿರಿ. (2×4=8)

1) ಕಾ.ತ. ಚಿಕ್ಕಣ್ಣ.
2) ತಿಲಕನಾಥ ಮಂಜೇಶ್ವರ.
3) ಚಿರತೆಯ ಬೇಟೆ.
4) ಕೆನ್ನಾಯಿಗಳಿಗೆ ಕಂಠಪಟ್ಟಿ ಅಳವಡಿಕೆ.

ಆ) ಯಾವುದಾದರೂ **ಎರಡು** ವಿಷಯಗಳಿಗೆ ಟಿಪ್ಪಣಿ ಬರೆಯಿರಿ. **(2×4=8)**

1) ಪಂಜೆ ಮಂಗೇಶರಾಯ.

2) ದೇಯಿ ಬೈದಿತಿ.

3) ಮಲ್ಲಯ ಬುದ್ಧಿವಂತ.

4) ಕೇಮರ ಬಲ್ಲಾಳ.

VI. **ಒಂದು** ವಾಕ್ಯದಲ್ಲಿ ಉತ್ತರಿಸಿರಿ. **(12×1=12)**

1) 'ಕರ್ಣಾಟಕ ಕಾದಂಬರಿ'ಯ ಕರ್ತೃ ಯಾರು ?

2) ಅಕ್ಕಮಹಾದೇವಿಯ ವಚನಗಳ ಅಂಕಿತ ಯಾವುದು ?

3) ಡಿ.ಎಸ್. ಕರ್ಕಿಯವರ ಪೂರ್ಣ ಹೆಸರೇನು ?

4) 'ಆಲೆಮನೆ' ಚಿತ್ರಕ್ಕಾಗಿ ಬರೆದ ಗೀತೆಗೆ ವಿಶೇಷ ಗೀತೆ ಪ್ರಶಸ್ತಿ ಪಡೆದವರು ಯಾರು ?

5) 'ಶೇಷ ಪ್ರಶ್ನೆ' ಕಥೆಯನ್ನು ಯಾವ ಕಥಾಸಂಕಲನದಿಂದ ಆರಿಸಲಾಗಿದೆ ?

6) ಕಿ.ರಂ. ನಾಗರಾಜ್ ಅವರು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಎಷ್ಟು ವರ್ಷಗಳ ಕಾಲ ಪ್ರಾಧ್ಯಾಪಕರಾಗಿದ್ದರು ?

7) ಉಲ್ಲಾಸ ಕಾರಂತರು ಯಾವ ಶಾಸ್ತ್ರದಲ್ಲಿ ಪರಿಣತರು ?

8) ದುಬಾರೆ ಕರಿಯ ಯಾರು ?

9) ಪಡುಮಲೆ ಬಲ್ಲಾಳನ ಹೆಸರೇನು ?

10) ದೇವ ಬಲ್ಲಾಳ ಯಾವ ಸೀಮೆಗೆ ಬಲ್ಲಾಳನಾಗಿದ್ದ ?

11) ಕಿನ್ನಿದಾರು ಎಂದರೆ ಯಾರು ?

12) ತುಪ್ಪೆಕಲ್ಲಿನ ಕಾಡು ಯಾವ ಸೀಮೆಗಳಿಗೆ ಗಡಿಯಾಗಿತ್ತು ?

---